## ಇದು ಗಡಿಯಾರದ ಗೂಡು

ಕೀ ಕೊಟ್ಟರೆ ಟಿಕ್ ಟಿಕ್ ಎಂದು ನಡೆಯುತ್ತಿದ್ದ, ಬೇಕಾದ ಸಮಯಕ್ಕೆ ಟ್ರಿಣ್ ಎಂದು ಸದ್ದು ಮಾಡಿ ನಮ್ಮನ್ನು ಎಬ್ಬಿಸುತ್ತಿದ್ದ ಸಮಯ ಪಾಲಕ, ನಮ್ಮ ಮನೆಯ ಗಡಿಯಾರದಣ್ಣನಿಗೆ ಮುದ್ದಾದ ಗೂಡು ಒಂದಿತ್ತು. ಅದರಲ್ಲಿನ ಸಣ್ಣ ಅರೆಯಲ್ಲಿ ಬೀಗದ ಕೈ ಮುಂತಾದ ವಸ್ತುಗಳನ್ನಿಡುವ ವ್ಯವಸ್ಥೆಯೂ ಇತ್ತು. ಈಗ ಸುಸ್ಥಿತಿಯಲ್ಲಿರದ ಈ ಗಡಿಯಾರ, ತಣ್ಣಗೆ ತನ್ನ ಗೂಡೊಳಗೆ ಕುಳಿತು, ನಮ್ಮ ಆಗಿ ಹೋದ ಕಾಲವನ್ನು ನೆನಪಿಸುವ ಅಮೂಲ್ಯ ಸ್ಮರಣಿಕೆಯಾಗಿ ಕಾಣುತ್ತಿದೆ.

—ಎಚ್.ಎಸ್. ನವೀನಕುಮಾರ್, ಹೊಸದುರ್ಗ





## ವೃತ್ತಿ ವೈಭವದ ಹೊಲಿಗೆ ಯಂತ್ರ

ಇತ್ತೀಚೆಗೆ ನಿಧನರಾದ ಹೊಸಪೇಟೆಯ ವೆಂಕಟೇಶ ತಾಪ್ಸೆ ಅವರ ಮನೆಯ ಶೋ ಕೇಸ್ ನಲ್ಲಿ 6—7 ಇಂಚಿನ ಹಳೆಯ ಕಾಲದ ಕೈ ಹೊಲಿಗೆ ಯಂತ್ರ ಕಣ್ಣಿಗೆ ಬಿತ್ತು. ಹಾಗೆಯೇ ಅದನ್ನು ಸೂಕ್ಷ್ಮವಾಗಿ ಗಮನಿಸಿದಾಗ ಟೈಲರಿಂಗ್ ವೃತ್ತಿಗೆ ಈ ಮೊದಲು ಇದ್ದ ವೈಭವ ನೆನಪಿಗೆ ಬಂತು. 'ದೇವರು ಮನುಷ್ಯನನ್ನು ಸೃಷ್ಟಿಸಿದ, ದರ್ಜಿ ಅವನನ್ನು ಸಜ್ಜನರನ್ನಾಗಿ ಮಾಡಿದ' (GOD CREAT MEN... TAILOR MADE HIM GENTLEMAN) ಎಂಬ ಮಾತಿಗೆ ದೃಷ್ಟಾಂತವಾಗಿ ತನ್ನ ತಂದೆಯ ದರ್ಜಿ ವೃತ್ತಿಯನ್ನು ಮುಂದುವರೆಸುತ್ತ 1982ರಿಂದ ಅನೇಕರನ್ನು ಸಜ್ಜನರನ್ನಾಗಿಸುವಲ್ಲಿ ವೆಂಕಟೇಶ್ ಅವರ ಪಾತ್ರ ದೊಡ್ಡದು.

'ಟ್ಯಾಪ್ಸನ್ ಟೈಲರ್' ಎಂದೇ ಹೆಸರು ವಾಸಿಯಾಗಿದ್ದ ವೆಂಕಟೇಶ್ ಅವರು ಶತಮಾನದಷ್ಟು ಹಳೆಯ ಈ ಹೊಲಿಗೆ ಯಂತ್ರವನ್ನು ತನ್ನ ತಂದೆಯಿಂದ ಬಳುವಳಿಯಾಗಿ ಪಡೆದು ಸಂರಕ್ಷಣೆ ಮಾಡಿದ್ದು ಮೆಚ್ಚುವಂತಹದ್ದು. ಬದಲಾವಣೆಯ ಕಾಲಘಟ್ಟದಲ್ಲಿ ಟೈಲರ್ ಮೇಡ್‌ಗಿಂತ ರೆಡಿಮೇಡ್‌ಗೆ ಬಟ್ಟೆಗಳಿಗೆ ಹೆಚ್ಚು ಆದ್ಯತೆ ಸಿಕ್ಕತೊಡಗಿತು. ರೆಡಿಮೇಡ್‌ಗೆ ಮಾರು ಹೋಗುತ್ತಿರುವ ನಾವು ಗತಕಾಲದ ವೈಭವದ ದಿನಗಳನ್ನು ಮರೆಯಬಾರದು.

—ಸೌಮ್ಯ ಶಿಗ್ಗಾಂವಕರ್, ಹಾಸನ



## ಕಲ್ಲಿನ ತಡೆಗೋಡೆಯ ಬಾವಿ

ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಕಲಸಿಪೇಟೆ ಎಂಬ ಪುಟ್ಟ ಹಳ್ಳಿಯಲ್ಲಿ ಪ್ರಸಾದಯ್ಯನ ಮಠವಿದೆ. ಅಲ್ಲಿ ಸಂಪೂರ್ಣವಾಗಿ ಕಲ್ಲಿನಿಂದಲೇ ನಿರ್ಮಿಸಲಾದ ಶಿಲಾಮಯ ಬಾವಿ ಇದೆ. ಇದು ಬಲು ಅಪರೂಪ.

ಸುಮಾರು 2 ಅಡಿ ಚೌಕಾಕಾರದ ಬಾವಿ ಇದಾಗಿದ್ದು, ಕಲ್ಲಿನಲ್ಲೇ ನಿರ್ಮಿಸಿದ ರಾಟೆಯು ಈ ಬಾವಿಯ ವಿಶೇಷ. ರಾಟೆಯ ಮೇಲೆ ಕೆಲ ಕೆತ್ತನೆಗಳು ಇದ್ದು, ಈಗ ಅದು ಅಷ್ಟಾಗಿ ಸ್ಪಷ್ಟವಾಗಿ ಗೋಚರಿಸುವುದಿಲ್ಲ. ಈ ಗ್ರಾಮಕ್ಕೆ ಸುಮಾರು 5 ಶತಮಾನಕ್ಕೂ ಹಳೆಯ ಇತಿಹಾಸವಿದ್ದು, ಈ ಬಾವಿಯು ಕೂಡ ಅಷ್ಟೇ ಪುರಾತನವಾದದ್ದು ಎಂದು ಸ್ಥಳೀಕರು ಹೇಳುತ್ತಾರೆ. ಇಲ್ಲಿರುವ ಪ್ರಸಾದಯ್ಯ ಗುರುಗಳ ಜೀವಂತ ಸಮಾಧಿಯ (ಗದ್ದುಗೆ) ಪೂಜೆಗೆ ಈ ಬಾವಿಯ ನೀರನ್ನು ಮಾತ್ರವೇ ಉಪಯೋಗಿಸುವುದು ಮತ್ತೊಂದು ವಿಶೇಷ.

—ಅಂಜನ್ ಕಾಯ್ಕಿಣಿ, ಸಾಗರ

### ನೀವೂ ಬರೆಯಿರಿ

'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾಗುವ 'ನಿಮ್ಮ ಪುಟ' ಓದುಗರ ಅಂಕಣಕ್ಕೆ ನಿಮ್ಮ ಸುತ್ತಮುತ್ತಲಿನ ವಿಶೇಷ ಸಂಗತಿಗಳ ಬಗ್ಗೆ ನೂರು ಪದಗಳ ಬರಹ ಮತ್ತು ಅದಕ್ಕೆ ಸಂಬಂಧಿಸಿದ ಚೆಂದದ ಫೋಟೊವನ್ನು ನಮಗೆ ಕಳುಹಿಸಿಕೊಡಿ.

**ವಿಳಾಸ:** editorsu@sudha.co.in

@SudhaWeekly